**ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ತಿ.ನರಸೀಪುರ.**

**ಸಿ.ಸಿ.ನಂ.249/2021**

ಸರಕಾರ ಪರಃ ಬನ್ನೂರು ಪೊಲೀಸ್ ಠಾಣೆ, ತಿ.ನರಸೀಪುರ -ವಿರುದ್ಧ- ರಾಜೇಶ ಮತ್ತು ಇತರರು

**ದೋಷಾರೋಪಣೆ**

ನಾನು ಚೇತನ್ ಅನ್ನಾಧಾನಿ ಮಂಜುನಾಥ, ಬಿ.ಎ.ಎಲ್., ಎಲ್.ಎಲ್.ಎಂ., ಪ್ರ. ದ. ನ್ಯಾ. ದಂ., ತಿ.ನರಸೀಪುರ ಈ ಮೂಲಕ,

**ಆರೋಪಿತರಾದಃ**

1. ರಾಜೇಶ,
ಬಿನ್.ಮಾಯೀಮಾದೇಗೌಡ,
ಸುಮಾರು 29 ವರ್ಷ ವಯಸ್ಸು,

2. ಉಮೇಶ,
ಬಿನ್.ಮಾಯೀಮಾದೇಗೌಡ,
ಸುಮಾರು 27 ವರ್ಷ ವಯಸ್ಸು,

3. ಗೌರಮ್ಮ,
ಕೋಂ.ಮಾಯೀಮಾದೇಗೌಡ,
ಸುಮಾರು 60 ವರ್ಷ ವಯಸ್ಸು,

ಆರೋಪಿತರ ವಾಸ.ಕರಿಹುರುಳಿ ಕೊಪ್ಪಲು ಗ್ರಾಮ,
ತಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

ನಿಮ್ಮ ಮೇಲಿರುವ ಆರೋಪಣೆ ಏನೆಂದರೆ,

ದಿನಾಂಕಃ 14.06.2020 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು, ಗುಡ್ಡದಕೊಪ್ಪಲು ಗ್ರಾಮದ ಚಾಸಾ.1 ರವರ ಬಾಬ್ತು ಸರ್ವೆ ನಂ.106/118 ಜಮೀನಿನಲ್ಲಿ ಬೆಳೆದಿದ್ದ ಜೋಳವನ್ನು ಧನಗಳ ಮೇವಿಗಾಗಿ ಕುಯುತ್ತಿದ್ದಾಗ ಆರೋಪಿತರಾದ ನೀವು ಚಾಸಾ.1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ನೀವು ಭಾ.ದಂ.ಸಂ. ಕಲಂ 447 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ.1 ರವರನ್ನು ತಡೆದು 2 ನೇ ಆರೋಪಿಯಾದ ನೀವು ಚಾಸಾ.1 ರವರನ್ನು ಉದ್ದೇಶಿಸಿ ಬೋಳಿಮಗನೆ, ಸೂಳೆಮಗನೆ ಈ ಜಮೀನು ನಿಮ್ಮಪ್ಪನದ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 504 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ತಬ್ಬಿಹಿಡಿದುಕೊಂಡು ಅಕ್ರಮವಾಗಿ ತಡೆದು ನಿಲ್ಲಿಸಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 341 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, 2 ನೇ ಆರೋಪಿಯಾದ ನೀವು ಕೈಯಿಂದ ಚಾಸಾ.1 ರವರ ಮೈಕೈಗೆ, ಹೊಟ್ಟೆಗೆ ಹಾಗೂ ಚಾಸಾ.1 ರವರು ಕೆಳಕ್ಕೆ ಬಿದ್ದಾಗ 1 ರಿಂದ 3 ನೇ ಆರೋಪಿತರಾದ ನೀವು ಚಾಸಾ.1 ರವರ ಹೊಟ್ಟೆ, ಎದೆ ಹಾಗೂ ಕೈಕಾಲುಗಳ ಮೇಲೆ ತುಳಿದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 323 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಈ ನಿವೇಶನದ ತಂಟೆಗೆ ಬಂದರೆ ನಿನ್ನನ್ನು ಮುಗಿಸುವುದಾಗಿ ಕೊಲೆ ಬೆದರಿಕೆ ಹಾಕಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 506 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆಃ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

3 ನೇ ಆರೋಪಿ

ಪ್ರಶ್ನೆಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

3 ನೇ ಆರೋಪಿ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

ದಿನಾಂಕಃ

ಪ್ರ.ದ.ನ್ಯಾ.ದಂ., ತಿ.ನರಸೀಪುರ.